ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನಸಭೆ

(ಎಂಟನೇ ಅಧಿವೇಶನ)

ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕ, 1999

(1999ರ ವಿಧಾನಸಭಾ ವಿಧೇಯಕ ಸಂಖ್ಯೆ 9)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕೆಲವು ತೆರಿಗೆ ಕಾನೂನುಗಳನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ,

ಇದು ಭಾರತ ಗಣರಾಜ್ಯದ ಐವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ಅಧಿನಿಯಮ, 1999 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಗೊತ್ತಪಡಿಸಬಹುದಾದಂತೆ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. 1957ರ ಕರ್ನಾಟಕ ಅಧಿನಿಯಮ 25ರ ತಿದ್ದುಪಡಿ.- ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದಲ್ಲಿ 1957ರಲ್ಲಿ (1957ರ ಕರ್ನಾಟಕ ಅಧಿನಿಯಮ 25) 13-ಎ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ,-

"13-ಎಎ ಸ್ವತ್ತಿನ ಮೇಲೆ ಮೊದಲನೇ ಚಾರ್ಜ್ (ಹೊಣೆ) :- ತತ್ಕಾಲದ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ವಿರೋಧವಾದುದು ಏನೇ ಇದ್ದಾಗ್ಯೂ, ಈ ಅಧಿನಿಯಮದ ಅಡಿಯಲ್ಲಿ ವ್ಯಾಪಾರಿ ಅಥವಾ ಯಾವೊಬ್ಬ ಇತರ ವ್ಯಕ್ತಿಯಿಂದ ಬಾಕಿ ಇರುವ ತೆರಿಗೆ ಅಥವಾ ಯಾವುದೇ ಇತರ ಮೊಬಲಗು, ಅಂಥ ವ್ಯಾಪಾರಿಯ ಅಥವಾ ವ್ಯಕ್ತಿಯ ಸ್ವತ್ತಿನ ಮೇಲೆ ಮೊದಲ ಚಾರ್ಜ್ (ಹೊಣೆ) ಆಗಿರತಕ್ಕದ್ದು.

3. 1979ರ ಕರ್ನಾಟಕ ಅಧಿನಿಯಮ 27ರ ತಿದ್ದುಪಡಿ :- ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ, 1979ರಲ್ಲಿ (1979ರ ಕರ್ನಾಟಕ ಅಧಿನಿಯಮ 27) II-ಎ ಅಧ್ಯಾಯದ ತರುವಾಯ ಈ ಮುಂದಿನ ಅಧ್ಯಾಯ ಹಾಗೂ ಪ್ರಕರಣಗಳನ್ನು ಸೇರಿಸತಕ್ಕದ್ದು ಎಂದರೆ :-

"ಅಧ್ಯಾಯ-II-ಬಿ"

4.ಇ (1) ಪರಿಭಾಷೆಗಳು :- ಈ ಅಧ್ಯಾಯದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಧಿಸೂಚಿತ ಸರಕುಗಳು" ಎಂದರೆ, ಈ ಅಧಿನಿಯಮದ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸರಕುಗಳ ವೈಕಿಯಿಂದ ಕಾಲಕಾಲಕ್ಕೆ ರಾಜ್ಯ ಸರ್ಕಾರದಿಂದ ಅಧಿಸೂಚಿಸಲಾಗುವ ಸರಕುಗಳು.

(ಬಿ) "ವ್ಯಕ್ತಿ" ಎಂಬುದರಲ್ಲಿ ಯಾವುದೇ ಕಂಪನಿ ಅಥವಾ ಅಸೋಸಿಯೇಷನ್ ಅಥವಾ ನಿಗಮಿತವಾಗಿರಲಿ ಅಥವಾ ಅಲ್ಲದಿರಲಿ, ವ್ಯಕ್ತಿಗಳ ನಿಕಾಯ ಮತ್ತು ಒಂದು ಹಿಂದೂ ಅವಿಭಕ್ತ ಕುಟುಂಬ, ಫರ್ಮ್, ಸಂಘ, ಕ್ಲಬ್, ಒಬ್ಬ ವ್ಯಕ್ತಿ, ಕೇಂದ್ರ ಸರ್ಕಾರ ಅಥವಾ ಯಾವುದೇ ಇತರ ರಾಜ್ಯದ ಸರ್ಕಾರ, ಕೇಂದ್ರಾಡಳಿತ ಪ್ರದೇಶ ಅಥವಾ ಸ್ಥಳೀಯ ಪ್ರಾಧಿಕಾರ ಒಳಗೊಳ್ಳುತ್ತವೆ.

(ಸಿ) "ಖರೀದಿ ಮೌಲ್ಯ" ಎದರೆ, ದರಪಟ್ಟಿಯಿಂದ ಖಚಿತಪಡಿಸಿಕೊಳ್ಳಲಾದ ಅಧಿಸೂಚಿತ ಸರಕುಗಳ ಮೌಲ್ಯ, ಮತ್ತು ವಿಮಾ ಮೌಲ್ಯ, ಸೀಮಾ ಸುಂಕ, ಕೌಂಟರ್ ವೇಲಿಂಗ್, ಸುಂಕಗಳ ಮಾರಾಟ ತೆರಿಗೆ, ಸಾಗಣೆ ಫೀಜು, ಹಾಸಲು ವೆಚ್ಚ ಮತ್ತು ಅಂಥ ಸರಕುಗಳ ಮೇಲೆ ಪ್ರಾಸಂಗಿಕವಾಗಿ ವಿಧಿಸಲಾದ ಎಲ್ಲಾ ಇತರೆ ಚಾರ್ಜ್‌ಗಳನ್ನು ಒಳಗೊಳ್ಳುತ್ತದೆ :

ಪರಂತು, ದರಪಟ್ಟಿಯು ಲಭ್ಯವಿಲ್ಲದ್ದರಿಂದಾಗಿ ಅಥವಾ ದರಪಟ್ಟಿಯನ್ನು ಹಾಜರುಪಡಿಸದಿದ್ದುದರಿಂದಾಗಿ, ಅಧಿಸೂಚಿತ ಸರಕುಗಳ ಖರೀದಿ ಮೌಲ್ಯವನ್ನು ಖಚಿತಪಡಿಸಿಕೊಳ್ಳಲಾಗದಿದ್ದಲ್ಲಿ ಅಥವಾ ಹಾಜರುಪಡಿಸಿದ ದರಪಟ್ಟಿಯು ಸುಳ್ಳೆಂದು ರುಜುವಾತಾಗಿದ್ದಾಗ ಅಥವಾ ಅಧಿಸೂಚಿತ ಸರಕುಗಳನ್ನು ಖರೀದಿಯ ಹೊರತಾಗಿ ಇತರ ರೀತಿಯಲ್ಲಿ ಪಡೆದುಕೊಂಡಿದ್ದರೆ, ಆಗ ಖರೀದಿ ಮೌಲ್ಯವು, ಬಹಿರಂಗ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿರುವ ಅದರ ಮೌಲ್ಯ ಅಥವಾ ಬೆಲೆ ಆಗಿರತಕ್ಕದ್ದು.

4. ಜಿ. ತೆರಿಗೆ ವಿಧಿಸುವಿಕೆ :- (1) 3ನೇ ಪ್ರಕರಣದಲ್ಲಿ ಅಥವಾ 4-ಬಿ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಯಾವುದೇ ಅಧಿಸೂಚಿತ ಸರಕುಗಳನ್ನು ಸ್ಥಳೀಯ ಪ್ರದೇಶದೊಳಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ತಂದಾಗ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 1957ರ (1957ರ ಕರ್ನಾಟಕ ಅಧಿನಿಯಮ 25) 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರಗಳಿಗೆ ಮೀರದ ಅಂಥ ದರಗಳಲ್ಲಿ ಉತ್ತರಾನ್ವಯವಾಗಿ ಅಥವಾ ಪೂರ್ವಾನ್ವಯವಾಗಿ ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ವಿಧಿಸಿದ ತೆರಿಗೆಯನ್ನು, ಅಧಿಸೂಚಿತ ಸರಕುಗಳನ್ನು ಸ್ಥಳೀಯ ಪ್ರದೇಶದೊಳಗೆ ತರುವ ಅಥವಾ ತರುವಂತೆ ಮಾಡುವ ಪ್ರತಿಯೊಬ್ಬ ವ್ಯಕ್ತಿಯು ತನಗಾಗಿ ಆಗಲೀ ಅಥವಾ ತನ್ನ ಮೂಲಕರ್ತನಿಗೆ ಆಗಲಿ ಅಥವಾ ಅಂಥ ಸರಕುಗಳು ಸ್ಥಳೀಯ ಪ್ರದೇಶದೊಳಗೆ ಪ್ರವೇಶಿಸಿದಾಗ ಅವುಗಳನ್ನು ವಶಾವಣೆಗೆ ತೆಗೆದುಕೊಳ್ಳುವ ಅಥವಾ ವಶಾವಣೆಗೆ ತೆಗೆದುಕೊಳ್ಳಲು ಹಕ್ಕುಳ್ಳ ಇತರ ವ್ಯಕ್ತಿಯು, ಸಂದಾಯ ಮಾಡತಕ್ಕದ್ದು.

(3) (1)ನೇ ಉಪ-ಪ್ರಕರಣದಲ್ಲಿ ಅಥವಾ (2)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಅಧಿಸೂಚಿತ ಸರಕುಗಳನ್ನು ಸ್ಥಳೀಯ ಪ್ರದೇಶದೊಳಗೆ ತರುವ ಅಥವಾ ತರುವಂತೆ ಮಾಡುವ ಯಾವನೇ ವ್ಯಕ್ತಿಯ ಮೇಲೆ, ಈ ಅಧಿನಿಯಮದ (3)ನೇ ಪ್ರಕರಣದ ಅಥವಾ 4-ಬಿ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಅಥವಾ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ ಸಂಖ್ಯೆ 25) ಅಡಿಯಲ್ಲಿ ಅಂಥ ಸರಕುಗಳ ಮೇಲೆ ತೆರಿಗೆ ಸಂದಾಯ ಮಾಡಲು ಬದ್ಧನಾಗಿದ್ದರೆ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ ಮತ್ತು ಅವನಿಂದ ವಸೂಲಾಗತಕ್ಕದ್ದಲ್ಲ.

4-ಜೆಜ್. ವಿವರಣ ಪಟ್ಟಿಗಳನ್ನು ಸಲ್ಲಿಸುವುದು ಮತ್ತು ತೆರಿಗೆ ನಿರ್ಧಾರಣೆ :-

(1) ವಿವರಣ ಪಟ್ಟಿಗಳನ್ನು ಸಲ್ಲಿಸುವುದಕ್ಕೆ, ತೆರಿಗೆ ನಿರ್ಧರಣೆ, ದಂಡನೆಗಳನ್ನು ವಿಧಿಸುವುದಕ್ಕೆ ಸಂಬಂಧಪಡುವವರ ಮಟ್ಟಿಗೆ 5 ಮತ್ತು 7ನೇ ಪ್ರಕರಣದ ಉಪಬಂಧಗಳು ಯಥೋಚಿತ ಬದಲಾವಣೆಗಳೊಂದಿಗೆ, ಈ ಅಧಿನಿಯಮದ ಅಡಿಯಲ್ಲಿ ನೊಂದಾಯಿತ ವ್ಯಾಪಾರಿಯಾಗಿರುವ ಅಥವಾ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 25) ಅಡಿಯಲ್ಲಿ ನೋಂದಾಯಿತನಾಗಿರುವ ಪ್ರತಿಯೊಬ್ಬ ವ್ಯಕ್ತಿಗೆ ಅನ್ವಯವಾಗತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿ ಹಾಗೆ ಉಲ್ಲೇಖಿಸಲಾದವುಗಳನ್ನು ಹೊರತುಪಡಿಸಿ, ಇತರ ವ್ಯಕ್ತಿಗಳ ಸಂದರ್ಭದಲ್ಲಿ,-

(ಎ) ವಿವರಣಪಟ್ಟಿಯನ್ನು ನಿಯಮಿಸಲಾದ ನಮೂನೆಯಲ್ಲಿ ದ್ವಿಪ್ರತಿಯಲ್ಲಿ ಭರ್ತಿ ಮಾಡಿ, ಸರಕುಗಳು ಯಾವ ಚೆಕ್‌ಪೋಸ್ಟ್ ಅಥವಾ ಸುಂಕದ ಕಟ್ಟೆಯ ಮೂಲಕ ಪ್ರವೇಶಿಸುತ್ತವೆಯೋ, ಅದರ ಪ್ರಭಾರದಲ್ಲಿರುವ ಅಧಿಕಾರಿಯ ಮುಂದೆ ಅಥವಾ ಸರಕುಗಳು ಪ್ರವೇಶಿಸುವ ಸ್ಥಳೀಯ ಪ್ರದೇಶದ ಮೇಲೆ ಅಥವಾ ಅಂಥ ವ್ಯಕ್ತಿಯು ಸಾಮಾನ್ಯವಾಗಿ ವಾಸಿಸುವ ಸ್ಥಳೀಯ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ತೆರಿಗೆ ನಿರ್ಧರಣಾ ಪ್ರಾಧಿಕಾರಿಯ ಮುಂದೆ ಸಲ್ಲಿಸತಕ್ಕದ್ದು ಮತ್ತು ಸಂದಾಯ ಮಾಡತಕ್ಕ ತೆರಿಗೆಯನ್ನು ನಗದಾಗಿ ಅಥವಾ ಕ್ರಾಸ್ ಮಾಡಿದ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಸಂದಾಯ ಮಾಡತಕ್ಕದ್ದು ಮತ್ತು,

(ಬಿ) 5ನೇ ಪ್ರಕರಣದ (3), (4) ಮತ್ತು (5)ನೇ ಉಪ-ಪ್ರಕರಣಗಳ ಉಪಬಂಧಗಳು, ಅವು ತೆರಿಗೆ ನಿರ್ಧರಣೆ ಮತ್ತು ದಂಡನೆಗಳಿಗೆ ಸಂಬಂಧಪಡುವವರ ಮಟ್ಟಿಗೆ, ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು.

4-ಐ. ತೆರಿಗೆ ಮತ್ತು ದಂಡನೆಗಳನ್ನು ವಿಧಿಸುವುದು ಮತ್ತು ಸಂಗ್ರಹಣೆ :- ಈ ಅಧಿನಿಯಮದ ಎಲ್ಲ ಉಪಬಂಧಗಳು, ತೆರಿಗೆ ಪ್ರಾಧಿಕಾರಿಗಳಿಗೆ ಸಂಬಂಧಪಡುವವ್ಯರ ಮಟ್ಟಿಗೆ ತೆರಿಗೆ ಮತ್ತು ದಂಡನೆಗಳ ಸಂಗ್ರಹಣೆ ಮತ್ತು ವಸೂಲಿ ಹಾಗೂ ಅಪೀಲುಗಳು, ಪುನರೀಕ್ಷಣೆ, ಅಪರಾಧಗಳು ಮತ್ತು ಅಭಿಯೋಜನೆಗಳು, ಈ ಅಧ್ಯಾಯದ ಅಡಿಯಲ್ಲಿ ತೆರಿಗೆ ವಿಧಿಸುವ ಸಂಬಂಧದಲ್ಲಿ ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 25) ಮತ್ತು ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ, 1979ನ್ನು (1979ರ ಕರ್ನಾಟಕ ಅಧಿನಿಯಮ 27) ತಿದ್ದುಪಡಿ ಮಾಡುವುದು ಮತ್ತು ಬಜೆಟ್ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕಾರ್ಯರೂಪಕ್ಕೆ ತರುವುದು ಅಗತ್ಯವೆಂದು ಭಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ

ಪ್ರಸ್ತಾವಿತ ಶಾಸನ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತ ಜ್ಞಾಪನ

ಖಂಡ-3 : ಈ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾಗಿರುವ 4 ಹೆಚ್ ಪ್ರಕರಣದ (2)ನೇ ಉಪ ಪ್ರಕರಣವು ವಿವರ ಪಟ್ಟಿಕೆಗಳನ್ನು ಮತ್ತು ತೆರಿಗೆ ನಿರ್ಧಾರಣೆಯನ್ನು ಸಲ್ಲಿಸುವ ನಮೂನೆಯನ್ನು ಗೊತ್ತುಪಡಿಸಲು ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ಸಾಮಾನ್ಯ ಸ್ವರೂಪದ್ದಾಗಿದೆ.

ಸಿದ್ದರಾಮಯ್ಯ
ಉಪ ಮುಖ್ಯ ಮಂತ್ರಿಗಳು

ಯಾಕೂಬ್ ಹರೀಫ್
ಕಾರ್ಯದರ್ಶಿ